C.R.P.67

Form No.4 (Criminal)
Deposition Sheets
(R.P.No.57)

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.129/2025 ಪಿ.ಡಬ್ಲ್ಯೂ-10 ಸಿ.ಡಬ್ಲ್ಯೂ-1

ದಿನಾಂಕಃ- 02.04.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಹೇಶ. ಬಿ. ಜಿ. |
| ತಂದೆಯ ಹೆಸರು | ಗಣೇಶ .ಹೆಚ್. ಆರ್ |
| ವಯಸ್ಸು | 44 ವರ್ಷ |
| ಉದ್ಯೋಗ | PI, ಲೋಕಾಯುಕ್ತ ಬೆಂಗಳೂರು |
| ವಾಸ | ಬೆಂಗಳೂರು |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 01.09.2023 ರಿಂದ 31.10.2025 ರವರೆಗೆ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ PI ಕೆಲಸ ಮಾಡಿದ್ದೇನೆ.

2. ನಾನು 31.07.2025 ರಂದು UDR 18/2025 ನೇ ಪ್ರಕರಣದ ಕಡತವನ್ನು ಚಾಸಾ-32 ನೇ ASI ಶಿವಾನಂದ ಸ್ವಾಮಿ ರವರಿಂದ ಪಡೆದಿದ್ದೇನೆ.

3. ನಾನು 31.07.2025 ರಂದು ನನ್ನ ಕೈಗೆ ಚಾಸಾ-32 ನೇ ASI ಶಿವಾನಂದ ಸ್ವಾಮಿ ರವರು ಶವ ತನಿಖಾ ವರದಿ ಮತ್ತು ಶವ ಪರೀಕ್ಷಾ ವರದಿಗಳನ್ನು ಕೊಟ್ಟರು. ನನಗೆ ಶವ ಪರೀಕ್ಷಾ ವರದಿ ಮತ್ತು ಶವ ತನಿಖಾ ವರದಿಯನ್ನು ಓದಿದಾಗ ಮೃತ ಶಿವಮಲ್ಲಪ್ಪ ಕುತ್ತಿಗೆ ಒತ್ತಿದ್ದರಿಂದ ಮೃತಪಟ್ಟಿದ್ದಾನೆ ಎಂದು ಅನ್ನಿಸಿತು. ಆದ್ದರಿಂದ ನನ್ನ ಅಭಿಪ್ರಾಯದ ವರದಿಯನ್ನು ತಯಾರಿಸಿ ಆರೋಪಿಯ ವಿರುದ್ದ BNS ಕಲಂ 103 ಅನ್ವಯ ದಂಡಿಸ್ಪಡುವ ಅಪರಾಧಗಳಿಗೆ 133/2025 ನೇ ಪ್ರಕರಣವನ್ನು ದಾಖಲಿಸಿ ನಿಪಿ-31 ರಲ್ಲಿ ಗುರುತಿಸಿರುವ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ಈ ಸಾಕ್ಷಿ ನಿಪಿ-31 ರಲ್ಲಿ

ಗುರುತಿಸಿರುವ ಪ್ರಥಮ ವರ್ತಮಾನ ವರದಿ ಮತ್ತು ಪ್ರಥಮ ವರ್ತಮಾನ ವರದಿಯ ಜೊತೆಯಲ್ಲಿ ಇರುವ ನಿವೇದನೆ ಎನ್ನುವ ತಲೆಬರಹ ಇರುವ ವರದಿಯಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿಗಳನ್ನು ನಿಪಿ–31(ಎ) ಮತ್ತು 31(ಬಿ) ಎಂದು ಗುರುತಿಸಲಾಯಿತು. ನಿವೇದನೆ ಎನ್ನುವ ತಲೆಬರಹ ಇರುವ ದಾಖಲೆಯನ್ನು ನಿಪಿ–31(ಸಿ) ಎಂದು ಗುರುತಿಸಲಾಯಿತು.

4. ನನ್ನ ಸೂಚನೆ ಪ್ರಕಾರ 31.07.2025 ರಂದು ಸಂಜೆ 7.00 ಗಂಟೆಗೆ ನಮ್ಮ ಠಾಣಾ ಸಿಬ್ಬಂದಿ ಆರೋಪಿಯನ್ನು ನನ್ನ ಸಮಕ್ಷಮ ಹಾಜರು ಪಡಿಸಿದರು. ನಾನು ಆರೋಪಿಯನ್ನು ದಸ್ತಗಿರಿ ಮಾಡಿ ಆತ ಹೇಳಿದ ವಿಚಾರಗಳನ್ನು ದಾಖಲಿಸಿಕೊಂಡಿದ್ದೇನೆ.

5. ನಾನು 31.07.2025 ರಂದು ತನಿಖೆ ನಡೆಸುವಾಗ ಪಂಚರಾಗಿ ಕೆಲಸ ಮಾಡುವಂತೆ ನಾಗರಾಜು ಮತ್ತು ಸ್ವಾಮಿ ರವರಿಗೆ ನಿಪಿ–15 ರಲ್ಲಿ ಗುರುತಿರುವ ನೋಟೀಸು ಜಾರಿ ಮಾಡಿ ಠಾಣೆಗೆ ಕರೆಸಿದ್ದೇನೆ.

6. ನಾನು 31.07.2025 ರಂದು ರಾತ್ರಿ 8.15 ಗಂಟೆಗೆ ಪಂಚರಾದ ನಾಗರಾಜು ಮತ್ತು ಸ್ವಾಮಿ ರವರ ಸಮಕ್ಷಮ ಆರೋಪಿ ಅಜಯ್ ಹೇಳಿ ತೋರಿಸಿದ ಬ್ಯಾಡರಹಳ್ಳಿ ಗ್ರಾಮದಲ್ಲಿ ಆತನ ತಂದೆ ತಾಯಿ ವಾಸವಾಗಿದ್ದ ಕೃತ್ಯ ನಡೆಸಿದ ಸ್ಥಳವನ್ನು ತನಿಖೆ ಮಾಡಿ ಫೋಟೋ ತೆಗೆಸಿ ನಿಪಿ–16 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿದ್ದೇನೆ.

7. ನಾನು 31.07.2025 ರಂದು ಸ್ಥಳ ಮಹಜರು ತಯಾರಿಸಿದ ನಂತರ ಆರೋಪಿಯನ್ನು ವೈದ್ಯರಿಂದ ಪರೀಕ್ಷೆ ಮಾಡಿಸಿ ಆತನ ಬೆರಳಿನ ಉಗುರುಗಳನ್ನು ವೈದ್ಯರಿಂದ ತೆಗೆಸಿ ಸಂಗ್ರಹಿಸಿದ್ದೇನೆ. ವೈದ್ಯರಿಂದ ಆರೋಪಿಯ ಬೆರಳಿನ ಉಗುರುಗಳನ್ನು ಪಡೆದ ವಿಚಾರವನ್ನು PF No. 161/2025 ರಲ್ಲಿ ನಮೂದಿಸಿ 01.08.2025 ರಂದು ನ್ಯಾಯಾಲಯಕ್ಕೆ ವರದಿ ಕಳುಹಿಸಿದ್ದೇನೆ.

8. ನಾನು 31.07.2025 ರಂದು ಸಿಬ್ಬಂದಿಯ ಜೊತೆಯಲ್ಲಿ ಆರೋಪಿಯನ್ನು ನ್ಯಾಯಾಲಯದ ಸಮಕ್ಷಮ ಹಾಜರು ಪಡಿಸಿದೆನು.

9. ನಾನು 02.08.2025 ರಂದು ಸುನಂದಮ್ಮ, ಉಮೇಶ, ಸುರೇಶ, ಶಿವಕುಮಾರ, ಬಾಣಪ್ಪ, ಕೌಶಿಕ್, ಮಣಿಕಂಠ ಮತ್ತು ರಾಜೇಶ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ.

10. ನನ್ನ ಸಮಕ್ಷಮ ಸುನಂದಮ್ಮ ನಿಪಿ–3 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ಹೇಳಿಕೆ ಕೊಟ್ಟಿದ್ದಾರೆ.

11. ನಾನು ತನಿಖೆ ಕಾಲದಲ್ಲಿ ವಶಪಡಿಸಿಕೊಂಡಿದ್ದ ಎಲ್ಲಾ ವಸ್ತುಗಳನ್ನು 13.08.2025 ರಂದು ಮೈಸೂರು RFSL ಕಛೇರಿಗೆ ಕಳುಹಿಸಿದ್ದೇನೆ.

12. ನಾನು 13.08.2025 ರಂದು ಮಂಡ್ಯ SP ರವರ ಆದೇಶದ ಮೇರೆಗೆ ಪ್ರಕರಣದ ಕಡತವನ್ನು ಚಾಸಾ–42 ನೇ ಹಲಗೂರು CPI ರವರಿಗೆ ಕೊಟ್ಟಿದ್ದೇನೆ.

13. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ತನಿಖೆ ಕಾಲದಲ್ಲಿ ದಸ್ತಗಿರಿ ಮಾಡಿದ್ದೇನೆ.

14. ತನಿಖೆ ಕಾಲದಲ್ಲಿ ಎಂಒ–4 ರಲ್ಲಿ ಗುರುತಿಸಿರುವ ಡಬ್ಬಿಯ ಒಳಗಿರುವ ವಸ್ತುವನ್ನು ವೈದ್ಯರಿಂದ ಪಡೆದಿದ್ದೇನೆ.

15. ಈ ಸಾಕ್ಷಿ ನಿಪಿ–3, 15, 16 ರಲ್ಲಿ ಗುರುತಿಸಿರುವ ದಾಖಲೆಗಳಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿಗಳನ್ನು ನಿಪಿ–3(ಎ), 15(ಎ) ಮತ್ತು 16(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ. ಎಂ ಬಿ ಬಿ ವಕೀಲರಿಂದಃ-

1. ಶಿವಮಲ್ಲಪ್ಪ ನವರ ಅಸ್ವಾಭಾವಿಕ ಮರಣಕ್ಕೆ ಆರೋಪಿ ಕಾರಣ ಅಲ್ಲ ಎನ್ನುವುದು ಸರಿಯಲ್ಲ.

2. ನನ್ನ ಸಮಕ್ಷಮ ಸುನಂದಮ್ಮ ನಿಪಿ-3 ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ಹೇಳಿಕೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

3. ನಾನು 31.07.2025 ರಂದು ರಾತ್ರಿ 8.15 ಗಂಟೆಗೆ ಪಂಚರಾದ ನಾಗರಾಜು ಮತ್ತು ಸ್ವಾಮಿ ರವರ ಸಮಕ್ಷಮ ಆರೋಪಿ ಅಜಯ್ ಹೇಳಿ ತೋರಿಸಿದ ಬ್ಯಾಡರಹಳ್ಳಿ ಗ್ರಾಮದಲ್ಲಿ ಆತನ ತಂದೆ ತಾಯಿ ವಾಸವಾಗಿದ್ದ ಕೃತ್ಯ ನಡೆಸಿದ ಸ್ಥಳವನ್ನು ತನಿಖೆ ಮಾಡಿ ಫೋಟೋ ತೆಗೆಸಿ ನಿಪಿ-16 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.